# ಆಧುನಿಕ ಕನ್ನಡ ಸಾಮಾಜಿಕ ನಾಟಕಗಳಲ್ಲಿ ಪ್ರತಿಯಜಮಾನಿಕೆಯ ಸ್ವರೂಪ

**ಗಣೇಶ[1] & ನಿಂಗರಾಜು ಹೆಚ್. ಎಸ್.[2]**

[1]ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಿಳಾ ಸರ್ಕಾರಿ ಗೃಹವಿಜ್ಞಾನ ಕಾಲೇಜು, ಹೊಳೆನರಸೀಪುರ, ಹಾಸನ.

[2]ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ಮಂಡ್ಯ.

**Received: 24-11-2023 ; Acepted: 10-08-2024 ; Published: 07-09-2024**

**DOI: https://doi.org/10.5281/zenodo.13724751**

**ABSTRACT:**

ಭಾರತದಂತಹ ದೇಶವು ಸಂಕೀರ್ಣವಾದ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದೆ. ಅಂತಹ ಪ್ರಾಬಲ್ಯಗಳ ಆಧಾರವು ಸಂಕೀರ್ಣ ಸ್ವರೂಪವನ್ನು ಹೊಂದಿದೆ. ಭಾರತದ ವರ್ಣ ಆಧಾರಿತ ಸಾಮಾಜಿಕ ವ್ಯವಸ್ಥೆಯಲ್ಲಿ, ವರ್ಣಾಸ್‌ನ ಮೇಲಿನ ಸ್ತರಗಳಲ್ಲಿ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಪ್ರಾಬಲ್ಯ ವ್ಯವಸ್ಥೆಗಳು ಛಿದ್ರಗೊಳ್ಳುತ್ತಿವೆ. ಸಬಾಲ್ಟರ್ನ್ ಅಡಿಯಲ್ಲಿ ಬರುವ ನಾಲ್ಕನೇ ವರ್ಣಾ, ಶೂದ್ರವರ್ಣ, ಸಾಮಾಜಿಕ-ಆರ್ಥಿಕ ಮತ್ತು ರಾಜಕೀಯ ಭಾಗವಹಿಸುವಿಕೆಯಿಂದ ವಂಚಿತವಾಗಿದೆ. ಸಾಂಪ್ರದಾಯಿಕವಾಗಿ ಮೇಲ್ವರ್ಗದ ಪ್ರಾಬಲ್ಯಗಳು ಕಠಿಣ ಅಭ್ಯಾಸಗಳನ್ನು ನಿರ್ಮಿಸುವ ಮೂಲಕ ಅಧೀನ ವರ್ಗವನ್ನು ಬಳಸಿಕೊಳ್ಳುತ್ತವೆ. ಈ ಅಧೀನ ನೆಲೆಗಳು ಮೇಲ್ಮಟ್ಟದ ಪ್ರಾಬಲ್ಯಗಳ ವಿರುದ್ಧ ಹೆಚ್ಚು ಸಹನೆ ಮತ್ತು ಮೂಕತನದಿಂದ ಪ್ರತಿಭಟಿಸಲು ಸಾಧ್ಯವಾಗುತ್ತಿಲ್ಲ. ಅವರ ನೋವು ಮತ್ತು ಸಂಕಟಗಳನ್ನು ಹೊತ್ತುಕೊಂಡು. ಆದರೆ ಅವರ ನೋವು ಮತ್ತು ಸಂಕಟಗಳನ್ನು ಬ್ರಿಟಿಷ್ ವಸಾಹತುಶಾಹಿ ಒದಗಿಸಿದ ಶಿಕ್ಷಣ ವ್ಯವಸ್ಥೆಯಿಂದ ಧ್ವನಿಸಲಾಯಿತು. ಸುಧಾರಣಾ ಚಳುವಳಿ, ಸ್ವಾತಂತ್ರ್ಯ ಚಳುವಳಿ, ಸಾಮಾಜಿಕ ಚಳುವಳಿಗಳು, ಸ್ತ್ರೀವಾದ ಮತ್ತು ರಾಷ್ಟ್ರೀಯತೆಯ ಪ್ರಭಾವವು ತೀವ್ರವಾಗಿತ್ತು. ಬದುಕುವ ಹಕ್ಕನ್ನು ತಿಳಿದಿಲ್ಲದ ವರ್ಗ, ಅವರು ಸ್ವಾಭಿಮಾನದ ಜೀವನವನ್ನು ಕಲಿಯಲು ಪ್ರಾರಂಭಿಸಿದರು. ಈ ನಿಟ್ಟಿನಲ್ಲಿ, ನೈತಿಕ ದೀನದಲಿತ ವರ್ಗಗಳು ಹಳೆಯ ಪ್ರಾಬಲ್ಯವನ್ನು ಸಿಲುಕಿಸಲು 'ಪ್ರತಿ-ಆಧಿಪತ್ಯ'ವನ್ನು ನಿರ್ಮಿಸಲು ಪ್ರಾರಂಭಿಸಿದವು.

ಪ್ರತಿ-ಆಧಿಪತ್ಯವು ಚಾಲ್ತಿಯಲ್ಲಿರುವ ಪ್ರಾಬಲ್ಯಕ್ಕೆ ವಿರುದ್ಧವಾದ ಅರ್ಥವಲ್ಲ. ಆಂಟೋನಿಯೊ ಗ್ರಾಮ್ಸಿ ಪ್ರಕಾರ, ಪ್ರತಿ-ಆಧಿಪತ್ಯವನ್ನು ನಿರ್ಮಿಸುವುದು ಎಂದರೆ ಪ್ರತಿ ಆಡಳಿತವನ್ನು ಅಭಿವೃದ್ಧಿಪಡಿಸುವುದು ಎಂದರ್ಥವಲ್ಲ. ಬೇರೆ ರೀತಿಯಲ್ಲಿ ಹೇಳುವುದಾದರೆ, ಇದು ಅಸ್ತಿತ್ವದಲ್ಲಿರುವ ಸ್ಥಿತಿ ಮತ್ತು ರಾಜಕೀಯದಲ್ಲಿ ಅದರ ನ್ಯಾಯಸಮ್ಮತತೆಗೆ ಮುಖಾಮುಖಿ ಅಥವಾ ವಿರೋಧವಾಗಿದೆ. ಆದರೆ ಜೀವನದ ವಿವಿಧ ಕ್ಷೇತ್ರಗಳಲ್ಲಿಯೂ ಸಹ ಇದನ್ನು ಗಮನಿಸಬಹುದು. ಮೇಲಾಗಿ ಇದು ಸಮಾಜವಾದದ ಉದ್ದೇಶವೂ ಅಲ್ಲ. ಇದು ದೈನಂದಿನ ಜೀವನದಲ್ಲಿ ಸಾಂಪ್ರದಾಯಿಕ ಸರ್ವಾಧಿಕಾರಿ ಮೌಲ್ಯಗಳ ಪ್ರಭಾವವನ್ನು ಕರಗಿಸುವುದು ಮತ್ತು ಸಮಾನ ಸಾಮುದಾಯಿಕ ಜೀವನದ ಮೌಲ್ಯಗಳನ್ನು ಜನರು ಕಂಡುಕೊಳ್ಳುವ ವಾತಾವರಣವನ್ನು ಸೃಷ್ಟಿಸುವುದು. ಪ್ರತಿ-ಆಧಿಪತ್ಯದ ಧ್ಯೇಯವೆಂದರೆ ಶೋಷಣೆಯ ಪ್ರಾಬಲ್ಯ ಮತ್ತು ಅದರ ಮೌಲ್ಯಗಳನ್ನು ಕಿತ್ತೊಗೆಯುವುದು ಮತ್ತು ಸಮಾನತೆಯ ಜೀವನವನ್ನು ಸೃಷ್ಟಿಸುವುದು. ಇಲ್ಲದಿದ್ದರೆ, ಮತ್ತೊಂದು ರೀತಿಯ ಪ್ರಾಬಲ್ಯ ವ್ಯವಸ್ಥೆಯು ಶೋಷಣೆಗೆ ಉದ್ಭವಿಸಬಹುದು. ಆಧುನಿಕ ಕನ್ನಡ ನಾಟಕಗಳು ಇಂತಹ ಪ್ರತಿ-

ಆಧಿಪತ್ಯವನ್ನು ಪ್ರತಿಪಾದಿಸಿವೆ ಮತ್ತು ಅಧೀನ ವರ್ಗಗಳು ಕೈಗೊಳ್ಳುವ ಪ್ರತಿಭಟನೆಯ ವಿವಿಧ ಸ್ವರೂಪಗಳನ್ನು ಚಿತ್ರಿಸುತ್ತದೆ.

**KEYWORDS:**

ಸಬಾಲ್ಟ್ರನ್, ವಿಚಾರ ಪ್ರಣಾಳಿಕೆ, ಊಳಿಗಮಾನ್ಯ, ಲಿಂಗಸಮಾನತೆ, ಸಮಾನತೆ, ಸಾಮರಸ್ಯ.

## ಪೀಠಿಕೆ:

ಭಾರತವು ಸಂಕೀರ್ಣತರ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿರುವಂತಹದ್ದು. ಇಲ್ಲಿನ ಯಜಮಾನಿಕೆಯ ನೆಲೆಗಳೂ ಸಹ ಅಷ್ಟೇ ಸಂಕೀರ್ಣ ಸ್ವರೂಪದಿಂದ ಕೂಡಿವೆ. ವರ್ಣಾಧಾರಿತ ಸಾಮಾಜಿಕ ವ್ಯವಸ್ಥೆ ಹೊಂದಿದ ನಮ್ಮ ದೇಶದ ಆರ್ಥಿಕ, ರಾಜಕೀಯ, ಸಾಮಾಜಿಕ ಯಜಮಾನಿಕೆಗಳು ಮೇಲ್ ಸ್ತರದಲ್ಲಿನ ಮೂರೂ ವರ್ಣಗಳಲ್ಲಿ ಹಂಚಿ ಹೋಗಿರುತ್ತವೆ. ನಾಲ್ಕನೆಯ ಶೂದ್ರವರ್ಣ ಯಾವುದೇ ಆರ್ಥಿಕ, ರಾಜಕೀಯ, ಸಾಮಾಜಿಕ ಯಜಮಾನಿಕೆಯಿಂದ ವಂಚಿಸಲ್ಪಟ್ಟ 'ಸಬಾಲ್ಟ್ರನ್' ನೆಲೆಯಲ್ಲಿರುತ್ತದೆ. ಪಾರಂಪರಿಕವಾಗಿ ಮೇಲಿನ ಯಜಮಾನಿಕೆಗಳು ಅಧೀನ ವರ್ಗವನ್ನು ಕಟ್ಟುನಿಟ್ಟಿನ ನಿಯಮಗಳನ್ನು ರೂಪಿಸುವ ಮೂಲಕ ಶೋಷಣೆಗೊಳಪಡಿಸುತ್ತಲೇ ಬಂದಿವೆ. ಈ ಅಧೀನ ನೆಲೆಗಳು ತಮ್ಮ ನೋವು, ಸಂಕಟಗಳನ್ನು ಸೈರಿಸುತ್ತಲೇ ಯಜಮಾನಿಕೆಗಳ ವಿರುದ್ಧ ಪ್ರತಿಭಟಿಸಲಾರದೆ, ಒಡಲೊಳಗೇ ಬೆಂದುಹೋಗಿವೆ. ಆದರೆ ಇವರ ನೋವು-ಸಂಕಟಗಳು ಧ್ವನಿ ಪಡೆದದ್ದು ಬ್ರಿಟಿಷ್ ವಸಾಹತುಶಾಹಿ ದೊರಕಿಸಿಕೊಟ್ಟ ಶಿಕ್ಷಣ ವ್ಯವಸ್ಥೆಯಿಂದ. ಅದರಲ್ಲೂ ಸುಧಾರಣಾ ಚಳವಳಿ, ಸ್ವಾತಂತ್ರ್ಯ ಚಳವಳಿಗಳು ಹಾಗೂ ರಾಷ್ಟ್ರೀಯವಾದ, ಸಮಾಜವಾದ, ಮಹಿಳಾವಾದ ಮುಂತಾದ ಚಿಂತನೆಗಳ ಪ್ರಭಾವದಿಂದ, ಬದುಕಿನ ಹಕ್ಕನ್ನೇ ತಿಳಿಯದಿದ್ದ ವರ್ಗ; ಸ್ವಾಭಿಮಾನದ ಬದುಕನ್ನು ಕಲಿಯಲಾರಂಭಿಸಿದವು. ಈ ನಿಟ್ಟಿನಲ್ಲಿ ಪಾರಂಪರಿಕವಾಗಿ ಬೇರೂರಿದ್ದ ಯಜಮಾನಿಕೆಗಳ ವಿರುದ್ಧ, ನೈತಿಕಮೌಲ್ಯ ಹೊಂದಿದ 'ಪ್ರತಿಯಜಮಾನಿಕೆ' ಕಟ್ಟಲು ಹವಣಿಸಿದವು.

## ಅಧ್ಯಯನದ ವ್ಯಾಪ್ತಿ:

ಪ್ರತಿಯಜಮಾನಿಕೆ ಎನ್ನುವುದು ಈಗಾಗಲೇ ಇರುವ ಯಜಮಾನಿಕೆಗೆ ವಿರುದ್ಧವಾಗಿ ಶೋಷಿತರು ಕಟ್ಟಿಕೊಳ್ಳಬೇಕಾದ ಅದೇ ಸ್ವರೂಪದ ಯಜಮಾನಿಕೆ ಎಂದಲ್ಲ. ಆ್ಯಂಟೋನಿಯೋ ಗ್ರಾಮ್ಷಿಯು "ಪ್ರತಿಯಜಮಾನಿಕೆ ಕಟ್ಟುವುದು ಎಂದರೆ - ಅಸ್ತಿತ್ವದಲ್ಲಿ ಇರುವ ಅಧಿಕಾರಸ್ಥ ವ್ಯವಸ್ಥೆಗೆ ಉತ್ತರವಾಗಿ ಮತ್ತೊಂದು ಅಧಿಕಾರಸ್ಥ ವ್ಯವಸ್ಥೆಯನ್ನು ಕಟ್ಟುವುದಲ್ಲ - ಇದು ಸಮಾಜವಾದದ ಮೂಲ ಉದ್ದೇಶವೂ ಅಲ್ಲ. ನಿತ್ಯ ಬದುಕಿನಲ್ಲಿ ರೂಢಿಗತವಾಗಿರುವ ಯಜಮಾನ ಮೌಲ್ಯಗಳ ಪ್ರಭಾವವನ್ನು ಕರಗಿಸಿ ಸಮಾನ ಸಾಮುದಾಯಿಕ ಬದುಕಿನ ಮೌಲ್ಯಗಳನ್ನು ಜನ ಕಂಡುಕೊಳ್ಳುವಂತಹ ವಾತಾವರಣವನ್ನು ನಿರ್ಮಿಸುವುದು."[1] ಎಂದು ವ್ಯಾಖ್ಯಾನಿಸುತ್ತಾನೆ. ಅಂದರೆ, ಯಾವ ಸ್ವರೂಪದ

ಯಜಮಾನಿಕೆಗಳಿಂದ ಶೋಷಣೆಗೆ ಒಳಗಾಗಲಾಗಿತ್ತೋ ಅಂತಹ ಯಜಮಾನಿಕೆಯ ಮೌಲ್ಯಗಳನ್ನು ಕರಗಿಸಿ ಸಮಾನ ಬದುಕನ್ನು ರೂಪಿಸುವ ಕೆಲಸವನ್ನು 'ಪ್ರತಿಯಜಮಾನಿಕೆ' ಮಾಡಬೇಕಾದ ಸಂಕಲ್ಪ ಹೊಂದಿರಬೇಕು. ಆಧುನಿಕ ಕನ್ನಡ ನಾಟಕಗಳು, ಇಂತಹ ಪ್ರತಿಯಜಮಾನಿಕೆಯನ್ನು ಪ್ರತಿಪಾದಿಸಿವೆ. ಹಾಗೂ ಅಧೀನವರ್ಗಗಳು ಯಜಮಾನಿಕೆಯ ವಿರುದ್ಧ ಯಾವೆಲ್ಲ ಸ್ವರೂಪದ ಪ್ರತಿಭಟನೆಗಳನ್ನು ದಾಖಲಿಸುತ್ತಾ ಬಂದಿವೆ ಎಂಬುದನ್ನು ಚಿತ್ರಿಸುತ್ತವೆ. ಪ್ರಸ್ತುತ ಲೇಖನದಲ್ಲಿ ಆಧುನಿಕ ಕನ್ನಡದ ಕೆಲವು ಪ್ರಾತಿನಿಧಿಕ ನಾಟಕಗಳನ್ನು ಪ್ರತಿಯಜಮಾನಿಕೆಯ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

**ಅಧ್ಯಯನದ ವಸ್ತು-ವಿಷಯ:**

ಆಧುನಿಕ ಕನ್ನಡ ನಾಟಕಗಳಲ್ಲಿ ಮೊದಲ ಜಾನಪದ ನಾಟಕವೆನ್ನಬಹುದಾದ ಚಂದ್ರಶೇಖರ ಕಂಬಾರರ 'ಜೋಕುಮಾರಸ್ವಾಮಿ' ಎಪ್ಪತ್ತರ ದಶಕದಲ್ಲಿ (1972) ರಚನೆಯಾದ ನಾಟಕ. 'ಉಳುವವನೆ ಭೂಮಿಯ ಒಡೆಯ' ಎಂಬ ಸಮಕಾಲೀನ ಕ್ರಾಂತಿಕಾರಕ ವಿಚಾರ ಪ್ರಣಾಳಿಕೆಯನ್ನು ಜನಪದ ಪುರಾಣದ ಮಿಥ್‌ನೊಂದಿಗೆ ಸಮನ್ವಯಗೊಳಿಸಿ ರಚಿಸಿದ್ದಾಗಿದೆ. ಯಜಮಾನಿಕೆಯ ಭಾಗವಾಗಿ ಜಮೀನ್ದಾರಿ ಪದ್ಧತಿಯ ಮುಖ್ಯ ಲಕ್ಷಣಗಳೆಂದರೆ ಕ್ರೌರ್ಯ, ಹಿಂಸೆ, ದಬ್ಬಾಳಿಕೆ, ಲೈಂಗಿಕ ಶೋಷಣೆ ಮುಂತಾದುವು. ಇವುಗಳಿಗೆ ಶೋಷಿತ ಸಮಾಜದ ಪ್ರತಿರೋಧ ನೆಲೆಗಳು ಭಿನ್ನವಾಗಿವೆ. ಈ ನಾಟಕದಲ್ಲಿನ 'ಜೋಕುಮಾರ' ಒಂದು ಜಾನಪದ ದೇವತೆಯ ಹೆಸರು. ಉತ್ತರ ಕರ್ನಾಟಕದ ಗ್ರಾಮೀಣ ಭಾಗದಲ್ಲಿ, ಬರಗಾಲದಲ್ಲಿ ತನ್ನ ಕೃಪೆಯಿಂದ ಮಳೆತರಿಸಬಲ್ಲ ಶಕ್ತಿ ಹೊಂದಿರುವ 'ಬಡವರ ಗಣಪ' ಎಂಬುದು ಜನಪದೀಯರ ನಂಬಿಕೆಯಾಗಿದೆ. ಶೂದ್ರ ಸಮುದಾಯಗಳು ಪಾರಂಪರಿಕ ಯಜಮಾನಿಕೆಯ ವಿರುದ್ಧ ಪ್ರತಿಯಜಮಾನಿಕೆಯ ಸ್ವರೂಪದಲ್ಲಿ ತಮ್ಮದೇ ಆದ ಶಕ್ತಿದೇವತೆಗಳನ್ನು ಸೃಷ್ಟಿಸಿಕೊಳ್ಳುತ್ತಿದ್ದವೆಂಬುದಕ್ಕೆ ಇದು ಸಾಕ್ಷಿ. ಅಲ್ಲದೆ, ಈ ನಾಟಕವು ಜಮೀನ್ದಾರರ ಕ್ರೌರ್ಯ, ದಬ್ಬಾಳಿಕೆಯ ಹಿಂದಿನ ಪ್ರತಿಷ್ಠಿತ ಅಂಶಗಳನ್ನು ಅವುಗಳ ಪೊಳ್ಳುತನಗಳನ್ನು ಗುರ್ತಿಸಿಕೊಂಡಿದೆ. ಅಂತಹ ಯಜಮಾನಿಕೆಯ ದೌರ್ಬಲ್ಯವಾದ ಪುರುಷತನದ ಪ್ರತಿಷ್ಠೆಯ ಮೌಲ್ಯವನ್ನು ಅಧೀನವರ್ಗವು ಸಫಲಕಾಮವೆಂಬ ಅಸ್ತ್ರದಿಂದ ಕರಗಿಸುವ ಮೂಲಕ ಶ್ರಮಸಂಸ್ಕೃತಿಗೆ ಮಾನ್ಯತೆ ದೊರಕಿಸಿಕೊಡುತ್ತದೆ.

ಗಿರೀಶ ಕಾರ್ನಾಡರ ನಾಟಕವಾದ 'ಹಯವದನ'ವು ಬೌದ್ಧಿಕ ಯಜಮಾನಿಕೆಯ ಪ್ರಭಾವವನ್ನು ಕರಗಿಸಿ ಶ್ರಮದ ಪಾರುಪತ್ಯವನ್ನು ಎತ್ತಿಹಿಡಿಯುತ್ತದೆ. ಶತ-ಶತಮಾನಗಳಿಂದ ಶೂದ್ರರನ್ನು ಕೇವಲ ಮನುಷ್ಯರಾಗಿಯೂ ಭಾವಿಸದೆ ಶೋಷಣೆಗೊಳಪಡಿಸುತ್ತಿದ್ದ ಬ್ರಾಹ್ಮಣರ ಸಾಮಾಜಿಕ ಯಜಮಾನಿಕೆಯ ಪ್ರಭಾವವನ್ನು, ಶಕ್ತಿಕಾಮವೆಂಬ ಅಸ್ತ್ರದ ಮೂಲಕ ಅಲ್ಲಗಳೆಯುತ್ತದೆ. ಏಕೆಂದರೆ, ಪದ್ಮಿನಿ ಮೊದಲಿನಿಂದ ಕೊನೆತನಕ ಹುಡುಕುವುದು, ಬಯಸುವುದು ತಾನು ಶಾಸ್ತ್ರೋಕ್ತವಾಗಿ ಕೂಡಲಾರದ ಕಪಿಲನ ಮೈಯನ್ನು ಮಾತ್ರ. ದೇವದತ್ತನ ಮೆದುಳು ಅವಳಿಗೆ ಖಂಡಿತವಾಗಿಯೂ ಬೇಕಾಗಿಲ್ಲ. ದೇವದತ್ತನಲ್ಲಿ ಅವಳ ಅನುಭವಕ್ಕೆ ಬರುವಂತೆ ಪೌರುಷವಿಲ್ಲ; 'ಸುಕುಮಾರ' ಅಷ್ಟೇ. ಕಪಿಲ ಮೈ-

ಮನಸ್ಸುಗಳೆರಡರಲ್ಲೂ ಉಜ್ವಲನಾಗಿದ್ದಾನೆ. ಒಂದು ಹೆಣ್ಣು ಸಾಮಾನ್ಯವಾಗಿ ಒಂದು ಗಂಡಿನಿಂದ ನಿರೀಕ್ಷಿಸಬಹುದಾದ ಗುಣ ಸಾಮರ್ಥ್ಯಗಳು ಅವನಲ್ಲಿವೆ. ಸ್ವತಃ ದೇವದತ್ತನೇ ಅದನ್ನು ಒಪ್ಪುತ್ತಾನೆ. ಜೊತೆಗೆ ಈ ನಾಟಕವು ಗಂಡಿನ ಯಜಮಾನಿಕೆಯ ಮೌಲ್ಯವನ್ನು ಅಧೀನನೆಲೆಯ ಹೆಣ್ಣು ನಿರ್ಧರಿಸುವುದನ್ನು ಕಾಣುತ್ತೇವೆ.

ಸುಜಾತ ಅಕ್ಕಿ ಅವರ 'ಚಾಮ ಚೆಲುವೆ' ನಾಟಕವು ಗಂಡಿನ ಯಜಮಾನಿಕೆಗೆ ಪ್ರತಿಯಾಗಿ ಹೆಣ್ಣಿನ ಪಾರುಪತ್ಯವನ್ನು ಮೆರೆಯುತ್ತದೆ. ಇಲ್ಲಿನ ನಂಜುಂಡ, ಸಮಾಜದೊಳಗೆ ಉನ್ನತ ಸ್ಥಾನವಿದ್ದರೂ ಕುಟುಂಬದೊಳಗೆ ತನ್ನ ಹೆಂಡತಿಯರಾದ ದೇವೀರಿ ಮತ್ತು ಪಾರ್ವತಿಯರ ಅಧೀನ. ಚಾಮುಂಡಿಯ ಜೊತೆಗಿನ ಪ್ರೇಮಸಲ್ಲಾಪ ತಿಳಿದ ದೇವೀರಿ ಮತ್ತು ಪಾರ್ವತಿಯರು, ಚಾಮುಂಡಿಯ ಜೊತೆ ಸಂಘರ್ಷಕ್ಕಿಳಿಯುತ್ತಾರೆ.

ಪ್ರಸ್ತುತ ನಾಟಕದಲ್ಲಿ ಜಾತಿ ತಾರತಮ್ಯವು ಆಹಾರ ಸಂಸ್ಕೃತಿಯ ತಾರ್ಕಿಕ ನೆಲೆಯಲ್ಲೇ ಜರುಗುತ್ತದೆ. ವಿವಾಹ ಸಂಬಂಧಗಳೂ ಆಹಾರ ಸಂಸ್ಕೃತಿಯೊಂದಿಗೆ ನಿರ್ಬಂಧಿಸಲ್ಪಡುತ್ತವೆ. ಚಾಮುಂಡಿಯು ಉರುಕಾತಿಯೊಂದಿಗೆ ಭಾವನನ್ನು ಕರೆತರುವಂತೆ ಕೇಳಿಕೊಂಡಾಗ "ಅಯ್ಯೋ ಅಕ್ಕಯ್ಯ ಅವರು ಸಸ್ಯ ಚೊಕ್ಕ ಭೋಜನ ಉಣ್ಣೋರು ನಾವು ಮಾರೀರು, ಮಸಣೀರು, ಕಪ್ಪು ಜನ. ಕುರಿ, ಕೋಳಿ, ಮೀನು ಮಿಡಚಿ ತಿನ್ನೋರು. ಅವ್ರಿಗೂ ನಮಗೂ ನೆಂಟಸ್ತನವಾ ಅಕ್ಕಯ್ಯ?"[2] ಎನ್ನುವ ಉರುಕಾತಿಯ ಮಾತುಗಳಲ್ಲಿ ಮಾನವನ ಸಾಮಾಜಿಕ ಶ್ರೇಷ್ಠತೆ ಮತ್ತು ಕನಿಷ್ಠತೆಗೆ ಆಹಾರ ಸಂಸ್ಕೃತಿಯೇ ಮುಖ್ಯ ಮಾನದಂಡವಾಗಿ ಪರಿಣಮಿಸಿದ್ದರ ವಿಪರ್ಯಾಸವನ್ನು ಕಾಣಬಹುದು.

ಪ್ರಾಗೈತಿಹಾಸಿಕ ಚರಿತ್ರೆಯು ಮಾನವನ ಆಹಾರ ಪದ್ಧತಿಯನ್ನು ಬೇಟೆ ಸಂಸ್ಕೃತಿಯಿಂದಲೇ ಗುರ್ತಿಸುತ್ತದೆ. ಜಗತ್ತಿನ ಪ್ರಾಚೀನ ನಾಗರಿಕತೆಗಳಲ್ಲೊಂದಾದ ಹರಪ್ಪ ಮತ್ತು ಮೊಹೆಂಜೊದಾರೋ ನಾಗರಿಕತೆಯಲ್ಲಿನ ಆಹಾರ ಸಂಸ್ಕೃತಿಯ ಬಗೆಗೆ ಎಸ್. ಶ್ರೀಕಂಠಶಾಸ್ತ್ರಿಗಳ ಹೇಳಿಕೆಯಿಂದ 'ಶಾಕಾಹಾರವೇ ಮುಖ್ಯವಾಗಿದ್ದರೂ ಮಾಂಸಾಹಾರವು ಸ್ವಲ್ಪಮಟ್ಟಿಗೆ ಪ್ರಚಾರದಲ್ಲಿದ್ದಿತು..., ಅಲ್ಲದೆ ಕೋಳಿ, ಕುರಿ, ಹಂದಿ, ಮೀನು, ಆಮೆ ಮುಂತಾದುವನ್ನು ಉಪಯೋಗಿಸುತ್ತಿದ್ದರು.' ಎಂದಿರುವುದು ಗಮನಾರ್ಹ. 'ಚಾಮ ಚೆಲುವೆ' ನಾಟಕದಲ್ಲಿನ ಚಾಮುಂಡಿ ಹೇಳುವ "ನಿಮ್ಮಜ್ಜ ನಿಮ್ಮ ಮುತ್ತಜ್ಜ ತಿಂದು ಬದುಕಿರೋದು ಕುರಿ, ಕೋಳಿ, ಕ್ವಾಣಾನೇ. ಈಗ ಹುಟ್ಟಿತು ಈ ದರಿದ್ರ ಜಾತಿ ಅನ್ನೋದು ಆಗೆಲ್ಲಾ ಏಕಾನ ಆಗಿತ್ತು."[3] ಮಾತುಗಳು ಇದನ್ನೇ ಸಮರ್ಥಿಸುತ್ತವೆ. ಅಂದರೆ, ಮನುಷ್ಯರು ಮೂಲತಃ ಮಾಂಸಾಹಾರ ಮತ್ತು ಶಾಕಾಹಾರ ಎರಡನ್ನೂ ರೂಢಿಸಿಕೊಂಡಿದ್ದು ಸ್ಪಷ್ಟ. ನಾಗರಿಕತೆ ಬೆಳೆದಂತೆ ಕಾಲಾನಂತರದಲ್ಲಿ ಮೇಲ್ವರ್ಗವು ಶಾಕಾಹಾರವನ್ನು ಶ್ರೇಷ್ಠ; ಮಾಂಸಾಹಾರವು ಕನಿಷ್ಠವೆಂಬ ಆಹಾರ ಸಂಸ್ಕೃತಿಯ ರಾಜಕಾರಣವನ್ನೆಸಗಿರುವುದು ಮನವರಿಕೆಯಾಗುತ್ತದೆ.

'ಕಂಚುಗನ್ನಡಿ' ನಾಟಕವು ಸ್ತ್ರೀ ಶಕ್ತಿಯ ಅನನ್ಯತೆಯನ್ನು ಗುರುತಿಸುವ ಪ್ರಸ್ತುತ ಸಮಾಜದ ನಡೆಗೆ ವಿಶಿಷ್ಟ ಒಳನೋಟಗಳನ್ನು ಕೊಡುವ ಶಕ್ತಿಯನ್ನು ಒಳಗೊಂಡದ್ದಾಗಿದೆ. ನಾಟಕದ ಆಶಯ ಕೇಂದ್ರೀಕೃತವಾಗಿರುವುದು ಅಹಲ್ಯೆ ಪಾತ್ರದ ಹಿಂದಿನ ಗಂಡಿನ

ರಾಜಕಾರಣವನ್ನು ಮನವರಿಕೆ ಮಾಡುವುದಾಗಿದೆ. ಎಂದೆಂದಿನಿಂದಲೂ ಶಿಕ್ಷೆಗೆ ಗುರಿಯಾಗಿ ಅಪರಾಧಿ ಸ್ಥಾನದಲ್ಲಿಯೇ ಹೂತುಹೋಗಿದ್ದ ಅಹಲ್ಯೆಯ ಮನಸ್ಸು ಉಷಾನರಸಿಂಹನ್ ಅವರ 'ಕಂಚುಗನ್ನಡಿ'ಯ ಪ್ರತಿಬಿಂಬದಲ್ಲಿ ಅವೆಲ್ಲ ನಿರಾಳವಾಗಿದೆ.

ಪು.ತಿ.ನ. ಅವರ ನಾಟಕದಲ್ಲಿ ಬೀಜಾಂಕುರ ರೂಪದಲ್ಲಿ ತಳೆದ ಸ್ತ್ರೀಸಂವೇದನೆ ಕಂಚುಗನ್ನಡಿಯಲ್ಲಿ ಬೇರುಬಿಟ್ಟ ಗಿಡವಾಗಿಯಲ್ಲದೆ, ಪುರುಷ ಪ್ರಾಧಾನ್ಯತೆಯನ್ನು ಪ್ರಶ್ನಿಸುವ ಮರದ ಸ್ವರೂಪವನ್ನು ಪಡೆಯುತ್ತದೆ. ವಿವಾಹೇತರ ಸಂಬಂಧ ತಪ್ಪು ಎನ್ನುವುದಾದರೆ, ಅಹಲ್ಯೆಯಷ್ಟೇ ಶಿಕ್ಷೆ ಇಂದ್ರನಿಗೇಕಿಲ್ಲ? ಎಂಬ ಮೂಲ ಪ್ರಶ್ನೆಯನ್ನು ಗಂಡಿನ ಯಜಮಾನಿಕೆಯ ವಿರುದ್ಧ ಒಡ್ಡುವುದು ಇಲ್ಲಿನ ಉದ್ದೇಶ.

ಪಾರಂಪರಿಕ ಯಜಮಾನಿಕೆ ಮೌಲ್ಯಗಳ ವಿರುದ್ಧ ಬೆಳೆದು ನಿಲ್ಲುವ ಗುರುತಿಸಲೇಬೇಕಾದ ಮುಖ್ಯ ಪಾತ್ರವೆಂದರೆ ಏಕಲವ್ಯ. ಏಕಲವ್ಯನನ್ನೇ ಕೇಂದ್ರವಾಗಿಟ್ಟು ಕನ್ನಡದಲ್ಲಿ ಸಾಕಷ್ಟು ನಾಟಕಗಳು ರಚನೆಗೊಂಡಿವೆ. ಅದರಲ್ಲಿ ಯಜಮಾನಿಕೆಯ ಸ್ವರೂಪವನ್ನು ವಿಶ್ಲೇಷಿಸುವ ನಾಟಕಗಳಲ್ಲಿ ಸಿದ್ದಲಿಂಗಯ್ಯನವರ 'ಏಕಲವ್ಯ' ಪ್ರಮುಖವಾದುದು.

ಇಲ್ಲಿನ ಏಕಲವ್ಯ ಅಧೀನವರ್ಗದ ಜನತೆಯ ಪ್ರತಿನಿಧಿಯಾಗಿ ನಿಲ್ಲುವವನು. ಯಾವ ಪ್ರಭುತ್ವದ ಕುಲಮದಗಳು ಏಕಲವ್ಯನನ್ನು ನಿಕೃಷ್ಟವಾಗಿ ಕಂಡಿದ್ದವೋ, ಅದೇ ರಾಜಶಾಹಿ ಶೂದ್ರನಾದ ಏಕಲವ್ಯನ ಮುಂದೆ ಸಹಾಯಹಸ್ತ ಬೇಡುವಂತಾಗುತ್ತದೆ. ಧರ್ಮಶಾಸ್ತ್ರಗಳಿರುವುದು ಅಸಮಾನತೆಯ ರಕ್ಷಣೆಗಾಗಿ ಎಂದು ನಂಬುವ ರಾಜಶಾಹಿಯನ್ನು ಕುರಿತು, 'ಅಂತಹ ನಿಮ್ಮ ಕುಲಧರ್ಮಗಳು ಅಳಿಯುವುದೇ ಮೇಲು' ಎಂದು ಪ್ರತಿರೋಧ ವ್ಯಕ್ತಪಡಿಸುತ್ತಾನೆ. ಪ್ರಭುತ್ವಗಳ ಘರ್ಷಣೆಗೆ ಅಧೀನ ಮುಗ್ಧವರ್ಗದ ಜನರ ಬದುಕು ಹೇಗೆ ಅಳಿಯುತ್ತದೆ. ಪ್ರಭುತ್ವಕ್ಕೊದಗುವ ಲಾಭಗಳೇನು? ಎಂಬುದರ ವಿವೇಚನೆಯಲ್ಲಿ ಏಕಲವ್ಯನನ್ನು ತೊಡಗಿಸಲಾಗಿದೆ. ಸಮಕಾಲೀನ ಸಂದರ್ಭದಲ್ಲಿ ನಿಂತು, ಶೂದ್ರರು, ದಲಿತರನ್ನು ಮತ ಬ್ಯಾಂಕುಗಳನ್ನಾಗಿಸಿಕೊಳ್ಳುತ್ತಿರುವ ರಾಜಕಾರಣದ ಮುಖವಾಡವನ್ನು ಪುರಾಣದ ನೆಲೆಯಲ್ಲಿ ವಿಮರ್ಶೆಗೊಡ್ಡುವುದನ್ನಿಲ್ಲಿ ಕಾಣಬಹುದು. ಏಕಲವ್ಯನ ಮೂಲಕ ಕರ್ಣನ ಪಾತ್ರವನ್ನು ತರಾಟೆಗೆ ತೆಗೆದುಕೊಳ್ಳುವ ನಾಟಕಕಾರರು ದಲಿತ, ಶೂದ್ರನೆಂಬ ಅನುಕಂಪದಿಂದ ಅಧಿಕಾರದ ಗದ್ದುಗೆಯೇರಿ ಸ್ವಾರ್ಥಸಾಧನೆಯಲ್ಲಿ ನಿರತರಾದ ರಾಜಕಾರಣಿಗಳನ್ನು ಕಟುಟೀಕೆಗೊಳಪಡಿಸುತ್ತಾರೆ. ಇಲ್ಲಿನ ಏಕಲವ್ಯ ಶೋಷಿತರ ಧ್ವನಿಯಾಗಿ ನಿಂತು ಶಿಕ್ಷಣದ ಸಾರ್ವತ್ರಿಕತೆ ಮತ್ತು ಸಮಾನತೆಗಾಗಿ ದುಡಿಯುವ ಸಂಕಲ್ಪ ಹೊಂದಿದವನಾಗಿದ್ದಾನೆ.

ಪಾರಂಪರಿಕ ಯಜಮಾನಿಕೆಯ ಅಮಾನವೀಯ ಲಕ್ಷಣಗಳನ್ನು ಪ್ರಖರವಾಗಿ ಮಂಡಿಸುವ ಮತ್ತೊಂದು ನಾಟಕ ಮಲ್ಲಿಕಾ ಘಂಟಿಯವರ 'ಚಾಜ'. ಹಾಗೆಯೇ ಇಂತಹ ಯಜಮಾನಿಕೆಗೆ ಪ್ರತಿಯಾಗಿ ಕಟ್ಟಿದ ಪ್ರತಿಯಜಮಾನಿಕೆ ಯಾವ ಸ್ವರೂಪದ್ದಾಗಿರಬೇಕೆಂಬುದನ್ನು ಈ ನಾಟಕ ಚರ್ಚಿಸುತ್ತದೆ.

'ಚಾಜ' ಎಂಬುದು ಉತ್ತರ ಕರ್ನಾಟಕದಲ್ಲಿ ಚಾಲ್ತಿಯಲ್ಲಿದ್ದ ದೇವದಾಸಿ ಪದ್ಧತಿ ಸಂದರ್ಭದಲ್ಲಿ ಬಳಸುತ್ತಿದ್ದ ಪ್ರಾದೇಶಿಕ ಪರಿಭಾಷೆಯ ಪದ. ಈ ಪದ್ಧತಿಗೆ ಹೆಣ್ಣನ್ನು ಅಳವಡಿಸುವ ಸಾಂಪ್ರದಾಯಿಕ ಪ್ರಕ್ರಿಯೆ ಮತ್ತು ಅದಕ್ಕಾಗಿ ಕೊಡುವ ದಕ್ಷಿಣೆ ಎಂಬರ್ಥಗಳಲ್ಲಿ ಬಳಕೆಯಾಗಿದೆ. 'ಚಾಜ' ಎಂಬುದು ಅಂಚಿನ ವರ್ಗದ ಹೆಣ್ಣಿನ ಶೋಷಣೆಗೆ ಜಮೀನ್ದಾರಿ ವ್ಯವಸ್ಥೆಯು ರೂಪಿಸಿದ ಅನಿಷ್ಟ ಆಚರಣೆಯಾಗಿದೆ. ಅದನ್ನು ಮುಖ್ಯವಾಗಿಟ್ಟುಕೊಂಡು ಮಹಿಳಾ ಶೋಷಣೆಯ ಸ್ವರೂಪವನ್ನು ಈ ನಾಟಕ ಚಿತ್ರಿಸುತ್ತದೆ.

ಯಾವುದೇ ಒಂದು ಯಾಜಮಾನ್ಯ ತನ್ನದೇ ಅನುಕೂಲಸಿಂಧುವಾದ ನಿಯಮಗಳನ್ನು ರೂಪಿಸಿ ಅವುಗಳಿಗೆ ಸಾಂಸ್ಕೃತಿಕ ಮೌಲ್ಯಗಳ ಸ್ಥಾನ ಕಲ್ಪಿಸಿರುತ್ತವೆ. ಅವನ್ನು ದೇವರು, ಧರ್ಮದ ಚೌಕಟ್ಟಿನಲ್ಲಿ ನಿರೂಪಿಸಿ ಅಧೀನವರ್ಗಗಳನ್ನು ನಿರ್ಬಂಧಿಸಿರುತ್ತವೆ. 'ಚಾಜ'ವು ಇಂತಹ ಸಾಂಸ್ಕೃತಿಕ ಆಚರಣೆಯ ಭಾಗವಾಗಿದೆ. ಇದು ರೂಢಿಯಿರುವಲ್ಲಿ ತಳವರ್ಗದ ಯಾರೇ ವಿವಾಹವಾದರು, ಮದುಮಗಳು ಊರಿನ ಮುಖ್ಯಸ್ಥನಾದ ಜಮೀನ್ದಾರನ ತೋಳ್ತೆಕ್ಕೆಯಲ್ಲಿ ಮೊದಲರಾತ್ರಿ ಕಳೆಯಬೇಕಾಗಿರುತ್ತದೆ. ಇದಕ್ಕೆ 'ಮೀಸಲು ಮುರಿಯುವುದು' ಎಂದು ಕರೆಯಲಾಗುತ್ತದೆ.

ವಸಾಹತೋತ್ತರ ಕಾಲಘಟ್ಟದ ಸಮಾಜದಲ್ಲಿ ಜಮೀನ್ದಾರಿಕೆಯು ತನ್ನ ಯಜಮಾನ್ಯ ಅಸ್ಮಿತೆಯ ತಡಕಾಟ ನಡೆಸುವಂತಾಯಿತು. ವಿಮರ್ಶಕ ಕೇಶವಶರ್ಮ ಅವರು ಹೇಳುವಂತೆ "ಪ್ರಭುತ್ವ ಎನ್ನುವುದು ಸಾಮಾಜಿಕ ಅವಸ್ಥಾಂತರಗಳಿಂದ ರೂಪುಗೊಳ್ಳಬೇಕಾದ ಒಂದು ಪ್ರಕ್ರಿಯೆಯಾಗಿದೆ."[4] ಅದರಂತೆ ಅಧಿಕಾರವು ಅಮೂರ್ತ ಸ್ವರೂಪದ್ದಾಗಿದ್ದು, ಬದಲಾದ ಕಾಲಮಾನಕ್ಕನುಗುಣವಾಗಿ ಬೇರೆ ಬೇರೆ ಸ್ವರೂಪ ಪಡೆಯುತ್ತದೆ. ವಸಾಹತುಪೂರ್ವದಲ್ಲಿ ಜಮೀನ್ದಾರಿಕೆ ಯಾಜಮಾನ್ಯದ ಮೂರ್ತರೂಪದಲ್ಲಿದ್ದರೆ, ವಸಾಹತು ಕಾಲಘಟ್ಟದಲ್ಲಿ ಸಂಪತ್ತಿನಿಂದ ಬೇರ್ಪಟ್ಟ ಅಧಿಕಾರದ ಸ್ವರೂಪವನ್ನು ಕಾಣುತ್ತೇವೆ. ಇದೇ ಸಂದರ್ಭದಲ್ಲಿ ದೇಶೀಯ ಚಳವಳಿಗಳು ಸೃಷ್ಟಿಸಿದ ರಾಷ್ಟ್ರೀಯತೆ ಹಾಗೂ ಸ್ವಾತಂತ್ರ್ಯೋತ್ತರ ಕಾಲದ ಪ್ರಜಾಪ್ರಭುತ್ವಗಳು ಜಮೀನ್ದಾರಿಕೆಯ ಯಾಜಮಾನ್ಯಕ್ಕೆ ಕುತ್ತು ತಂದವು. ಈ ಹಿನ್ನೆಲೆಯಲ್ಲಿ ಶೋಷಿತ ಸಮುದಾಯಗಳು ಧ್ವನಿ ಪಡೆಯಲೆತ್ನಿಸಿದವು.

ನಾಟಕದಲ್ಲಿ ಕುಲಕರ್ಣಿಯು "ದೇಸಾಯರ ಆಹಾರದಾಗ ಅಕ್ಷರ ಇರುವುದಿಲ್ಲ ಮನುಷ್ಯನಿಗೆ ಸಂಸ್ಕಾರ ಬೇಕರಿ ಸಂಸ್ಕಾರ."[5] ಎಂದು ಆಹಾರ ಸಂಸ್ಕೃತಿಯನ್ನಾಧರಿಸಿ ಜ್ಞಾನದ ಮೇಲೆ ಬ್ರಾಹ್ಮಣಶಾಹಿ ಪ್ರತಿಷ್ಠಾಪಿಸಿದ ಬೌದ್ಧಿಕ ಒಡೆತನವನ್ನು ಕುರಿತು ಹೇಳುತ್ತಾನೆ. ಇಂತಹ ಬೌದ್ಧಿಕ ಪ್ರಭುತ್ವದ ವಿರೋಧಿ ಧಾರೆಯು ಪ್ರಾಚೀನ ಕನ್ನಡ ಸಾಹಿತ್ಯದಿಂದಲೂ ಹರಿದು ಬಂದಿರುವುದನ್ನು ಕಾಣುತ್ತೇವೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮುಖ್ಯವಾಗಿ ಕುವೆಂಪು ಅವರ ನಾಟಕ, ಕಾದಂಬರಿಗಳಲ್ಲಿ ಬೌದ್ಧಿಕ ಒಡೆತನದ ಪ್ರತಿರೋಧವು ಜೀವಂತಿಕೆ ಪಡೆದಿದೆ. ವರ್ತಮಾನ ಕನ್ನಡ ಸಾಹಿತ್ಯದಲ್ಲಿಯೂ ಇದು ಮುಖ್ಯಧಾರೆಯಾಗಿ ಪ್ರವಹಿಸುತ್ತಲಿದೆ.

ಪ್ರಸ್ತುತ ನಾಟಕವು ಎರಡು ನೆಲೆಯ ಸಂಘರ್ಷವನ್ನು ಹೊಂದಿದೆ. ಮೊದಲನೆಯದು ಯಜಮಾನಿಕೆ ಮತ್ತು ಸಂಘಟನಾತ್ಮಕ ಮಹಿಳಾನೆಲೆ. ಎರಡನೆಯದು, ಯಜಮಾನಿಕೆ

ಮತ್ತು ಅದರ ಮೌಲ್ಯಗಳನ್ನು ಕರಗಿಸಿ ನೈಜನೆಲೆಯಲ್ಲಿ ಕಟ್ಟುವ ಆಶಯ ಹೊಂದಿದ ತಳವರ್ಗದ ಪ್ರತಿಯಜಮಾನಿಕೆಯ ನೆಲೆ.

ನಾಟಕದಲ್ಲಿನ ದೇಸಾಯಿ ಊಳಿಗಮಾನ್ಯ ಯಜಮಾನಿಕೆಯ ಪ್ರತೀಕವಾದರೆ, ಎಂ.ಎಲ್.ಎ. ರಮೇಶ ಪ್ರತಿಯಾಜಮಾನಿಕೆಯ ರೂಪವಾಗಿದ್ದಾನೆ. ಇವರಿಬ್ಬರ ನಡುವೆ ನಡೆಯುವ ಸಂಘರ್ಷ ವೈಯಕ್ತಿಕದ್ದಾದರೂ ಇಬ್ಬರೂ ಅಧಿಕಾರ ಹೊಂದಿದವರಾದ್ದರಿಂದ ಅದು ಗುಂಪಿನ ಸ್ವರೂಪವನ್ನು ಪಡೆಯುತ್ತದೆ. ಒಂದೆಡೆ ದೇಸಾಯಿ ಊಳಿಗಮಾನ್ಯತೆಯ ಯಜಮಾನಿಕೆಯ ಅಸ್ತಿತ್ವಕ್ಕಾಗಿ ಸಂಘರ್ಷಕ್ಕಿಳಿಯುತ್ತಾನೆ. ಮತ್ತೊಂದೆಡೆ ರಮೇಶ ತಳವರ್ಗದ ದ್ವೇಷ ಸಾಧನೆಯ ಪ್ರತೀಕವಾಗಿ ಪ್ರತಿಯಜಮಾನನಾಗಿದ್ದಾನೆ. ಇಲ್ಲಿನ ಪ್ರತಿಯಜಮಾನಿಕೆಯು ಮೂಲ ಯಜಮಾನಿಕೆಯ ಎಲ್ಲಾ ಚಹರೆಗಳನ್ನು ಪಡೆದು ಅಧೀನವರ್ಗಗಳ ಶೋಷಣೆಗೆ ಸೃಷ್ಟಿಯಾದ ಮತ್ತೊಂದು ಯಜಮಾನಿಕೆಯಾಗುತ್ತದೆ. ಇಂತಹ ಯಜಮಾನಿಕೆಯನ್ನು ಕಡೆಗೆ ತಳಸಮೂಹವೇ ಖಂಡಿಸುವುದನ್ನು ಕಾಣುತ್ತೇವೆ. ನಾಟಕದಲ್ಲಿ ತಳವಾರ, ಕಲ್ಲಿ, ಬಸವಣ್ಣನ ಪಾತ್ರಗಳಲ್ಲಿ ಇದನ್ನು ಗುರ್ತಿಸಬಹುದು.

"ಧನೇರ ಆ ಹೊಲೇರ ಹವಳ್ಯಾನ ಮಗಾ ರಾಮ್ಯಾ ಅದಾನಲ್ಲರಿ,. .., ಎಂ.ಎಲ್.ಎ. ಆದ ಮ್ಯಾಲ. ..., ಕೆರ್ಯಾಗ ಹುಟ್ಟಿದ್ದ ಮರತಾನ.., ಊರಿಗೆ ಬಂದ್ರ ಕೇರಿಗೆ ಹೋಗುದಿಲ್ಲರಿ"[6] ಎನ್ನುವ ತಳವಾರನ ಮಾತುಗಳು ಹಾಗೂ ಕಲ್ಲಿಯ ಮಾತುಗಳಾದ "ಎವ್ವಾ ಅವರಿಗೆ ಮ್ಯಾಲಿನ ಜಾತಿಯವರನ್ನ ಕಂಡ್ರ ಆಗಂಗಿಲ್ಲ ನೋಡ್ರಿ..., ಮ್ಯಾಲಿನ ಜಾತ್ಯೋರು ಹ್ಯಾಂಗ ನಮ್ಮ ಹೆಣ್ಣ ಮಕ್ಕಳನ್ನ, ಅಕ್ಕ ತಂಗೇರನ್ನ ಅಪಮಾನ ಮಡ್ಯಾರ ಅವರ ಮರ್ಯಾದಿ ತೆಗೆದಾರಲ್ಲ ಹಂಗ ನಾವು ಅವರ ಹೆಣ್ಣ ಮಕ್ಕಳ ಮರ್ಯಾದಿ ತೆಗಿಬೇಕು..., ದೇಸಗತಿ ಮನೀತನ ಏನ ಏನ ಊರಾಗ ಮಾಡಕೊಂತ ಬಂದಿದ್ರಲ್ಲ ಅದನ್ನೆಲ್ಲಾ ಅವನು ಮಾಡತಾನಂತ. ಮಾನಮ್ಮಿ ಬನ್ನಿ ಪೂಜೇಕ ಇನ್ನ ಮ್ಯಾಲೆ ನಮ್ಮ ಅಪ್ಪಾರ ಹೋಗಂಗಿಲ್ಲಂತ. ಅವನ ಹೊಕ್ಕಾನಂತ, ಮೇಣೇದಾಗ ಅವನ ಕುಂದರತಾನಂತ..."[7] ಹೀಗೆ ತಳವಾರ ಹಾಗೂ ಕಲ್ಲಿಯ ಪಾತ್ರಗಳು ಸ್ಪಷ್ಟವಾಗಿ ಸಾಂಪ್ರದಾಯಿಕ ಯಜಮಾನಿಕೆಯ ಚಹರೆಯನ್ನು ಹೇಳುತ್ತಿವೆ.

ಪ್ರತಿಯಜಮಾನಿಕೆಯ ಇಂಥ ನಡವಳಿಕೆಗೆ ಮುಖ್ಯ ಕಾರಣವೆಂದರೆ ಅಧಿಕಾರ ಮತ್ತು ಅನುಕರಣೆ. "ಸಾವಂತ್ರಿ: (ಸಿಟ್ಟಿನಿಂದ) ದೇಸಾಯಿಗೆ ಇವನಿಗೆ ಏನ ಪರಕ ಇಲ್ಲ ಬಿಡು..., ಗಾಂಧಿ, ಅಂಬೇಡ್ಕರ್ ಹೆಸರಿನ ಮ್ಯಾಗ ರಾಜಕೀಯ ಮಾಡಕ ನಾಚಿಕಿ ಬರಬೇಕ, ಇವರಿಗೆ ಅವರ ಹೆಸರ ಹೇಳಾಕ"[8] ಎಂದು ಅಧಿಕಾರದ ಶೋಷಣಾತ್ಮಕ ಗುಣಲಕ್ಷಣಗಳನ್ನು ಖಂಡಿಸುತ್ತಾಳೆ. ಅಧಿಕಾರವೆಂಬುದು ಯಾವುದೇ ಲಿಂಗ, ಜಾತಿ, ವರ್ಗಗಳಲ್ಲೂ ತನ್ನ ಸ್ವರೂಪವನ್ನು ಪ್ರಕಟಿಸಬಲ್ಲದು. ಪುರುಷ ಪ್ರಧಾನವ್ಯವಸ್ಥೆಯಲ್ಲಿ ಗಂಡು, ಕೌಟುಂಬಿಕವಾಗಿ ಅತ್ತೆಯ ಸ್ಥಾನ, ಸಾಮಾಜಿಕವಾಗಿ ಮೇಲ್ಜಾತಿ, ಆರ್ಥಿಕವಾಗಿ ಜಮೀನ್ದಾರ ಅಥವಾ ಬಂಡವಾಳಶಾಹಿಗಳಲ್ಲಿ ಅಧಿಕಾರ ತನ್ನ ಲಕ್ಷಣವನ್ನು ಪ್ರಕಟಿಸುತ್ತದೆ. ಸ್ವಾತಂತ್ರ್ಯೋತ್ತರ ಪ್ರಜಾಪ್ರಭುತ್ವದಲ್ಲಿ ರಾಜಕೀಯವಾಗಿ ತಳವರ್ಗಕ್ಕೆ ದಕ್ಕಿದ ಅಧಿಕಾರವೂ ಇಂಥದ್ದೇ ಸ್ವರೂಪವನ್ನು ಹೊಂದಿರುವುದನ್ನು ರಮೇಶನಲ್ಲಿ ಕಾಣುತ್ತೇವೆ. ಗ್ರಾಮ್ಷಿಯು "ಸಬಾಲ್ಟ್ರನ್‌ಗಳು

ಯಜಮಾನಿಕೆ ನಡೆಸಬೇಕಾದರೆ ಅಮೂರ್ತ, ಯೋಜನೆ ಮತ್ತು ದೂರಗಾಮಿ ಗುಣಗಳನ್ನು ರೂಢಿಸಿಕೊಳ್ಳಬೇಕು"[9] ಎಂದು ಅಭಿಪ್ರಾಯ ಪಡುತ್ತಾನೆ. ಎಂ.ಎಲ್.ಎ. ಆಗಿ ಅಧಿಕಾರ ಪಡೆದ ತಳವರ್ಗದ ರಮೇಶನಿಗೆ ತನ್ನ ವರ್ಗವನ್ನು ಪಾರಂಪರಿಕ ಶೋಷಣೆಯಿಂದ ಮುಕ್ತಿಗೊಳಿಸುವ ದೂರಗಾಮಿ ಯೋಜನೆಯನ್ನಾಗಲೀ, ತಿಳಿಮೆಯನ್ನಾಗಲೀ ಹೊಂದಿಲ್ಲ. ಆದ್ದರಿಂದ ಸಬಾಲ್ಟರ್ನ್ ನೆಲೆಯ ಪ್ರತಿಯಜಮಾನಿಕೆಯೊಡ್ಡುವ ಸಂಘರ್ಷ ಹುಸಿಯಾಗಿ ಸೋಲುತ್ತದೆ.

ನಾಟಕವು ಮುಖ್ಯವಾಗಿ ಮಹಿಳಾ ಶೋಷಣೆಯ ವಿರುದ್ಧ ಪ್ರತಿರೋಧವನ್ನು ಒಡ್ಡುತ್ತದೆ. ಇಲ್ಲಿ ಎರಡು ನೆಲೆಗಳಲ್ಲಿ ಪ್ರತಿರೋಧವಿದೆ. ಮೊದಲನೆಯದು, ಲಿಂಗ ತಾರತಮ್ಯ ಮೂಲವಾದ ಪುರುಷ ಪ್ರಧಾನವ್ಯವಸ್ಥೆಯ ವಿರುದ್ಧ ಮಹಿಳಾ ವಿಮೋಚನೆಯ ಭಾಗವಾಗಿ; ಎರಡನೆಯದು ಜಾತಿನೆಲೆ. ಒಂದರಲ್ಲಿ 'ಮಹಿಳೆ ದಲಿತಳು' ಎಂಬ ನಿಲುವಿದ್ದರೆ, ಮತ್ತೊಂದರಲ್ಲಿ' 'ದಲಿತ ಮಹಿಳೆ' ಎಂಬ ನಿಲುವಿದೆ. ವಸಾಹತುಶಾಹಿ ಭಾರತದಲ್ಲಿಯೇ ಸತಿನಿಷೇಧ, ಬಾಲ್ಯವಿವಾಹ ನಿಷೇಧ, ಮತದಾನದ ಹಕ್ಕನ್ನು ದೊರಕಿಸಿಕೊಟ್ಟಿತ್ತು. ಇದು ಸಂವಿಧಾನ ರಚನೆಯ ಸಂದರ್ಭದಲ್ಲಿ ಮಹಿಳೆಯ ಸ್ವಾಯತ್ತತೆ ಕುರಿತು ಲಕ್ಷ್ಯ ಕೊಡುವಂತಾಯಿತು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಮಹಿಳಾ ಶೋಷಣೆಯ ವಿರುದ್ಧ ಕಾನೂನು ಸವಲತ್ತುಗಳು ದೊರೆತವು. ಆದರೆ ಪರಂಪರೆಯಿಂದ ಪ್ರಜಾಪ್ರಭುತ್ವದವರೆಗೂ ಪುರುಷ ತನ್ನ ಅಧಿಕಾರವನ್ನು ಗಟ್ಟಿಗೊಳಿಸುತ್ತಲೇ ಬಂದ; ಹೆಣ್ಣಿನ ಅಧಿಕಾರಗಳನ್ನೂ ತನ್ನ ಆಸಕ್ತಿಯ ಒಳಗೆ ನಿರ್ಬಂಧಿಸಿದ. ಪ್ರಸಕ್ತದಲ್ಲಿಯೂ ಮಹಿಳೆಯ ರಾಜಕೀಯ ಚಟುವಟಿಕೆಗಳು ಅಂತಹ ನಿರೀಕ್ಷಿತ ಬದಲಾವಣೆ ಕಂಡುಬಂದಿಲ್ಲ. ಅರಿಮೆ ಹಾಗೂ ಸಂಘಟನೆಯ ಕೊರತೆ ಇದಕ್ಕೆ ಕಾರಣ.

'ಚಾಜ' ನಾಟಕದ ಸಾವಂತ್ರಿ ಶೋಷಣೆಯ ವಿಮೋಚನೆಯ ಅರಿವಿನೊಂದಿಗೆ ಪುರುಷಾಧಿಕಾರದ ವಿರುದ್ಧ ಹಕ್ಕೊತ್ತಾಯ ಮಾಡುವ ಪಾತ್ರವಾಗಿದೆ. ದೇಸಾಯಿಯ ಎರಡನೆಯ ಹೆಂಡತಿಯಾದ ಸಾವಂತ್ರಿ, ಪಾರಂಪರಿಕವಾಗಿ ಹೆಣ್ಣನ್ನು ಭೀತಿಯ ದೌರ್ಬಲ್ಯಕ್ಕೆ ತಳ್ಳಿದ ಗಂಡಿನ ಹುಸಿದರ್ಪವನ್ನು ಟೀಕಿಸುವವಳಾಗಿದ್ದಾಳೆ. ಜೊತೆಗೆ ಗಂಡಿನ ಕರ್ತವ್ಯ ಭ್ರಷ್ಟತೆಯನ್ನು ಪ್ರಶ್ನಿಸುತ್ತಾಳೆ.

ಸಾವಂತ್ರಿಯು, 'ನಮ್ಮೂರ ಹುಚ್ಚಪ್ಪನ ಮಠದಾಗ ಬಜನಿ ಮಾಡತಿದ್ರು, ಶರಣಾ ಶರಣಿಯರ ಬಗ್ಗೆ ಪುರಾಣ ಹೇಳತಿದ್ದರು. ಗಂಡಾ ತಪ್ಪಿ ನಡದ್ರ ಹೆಂಡ್ತಿಯಾದಕಿ ಸುಮ್ಮಕ ಇರಬಾರದಂತ. ಅವಗ ತಿದ್ದಿ ಬುದ್ಧಿ ಹೆಳಬೇಕಂತ' ಎಂದು ಗಂಡನ ಆಸೆಬುರುಕತನವನ್ನು ಖಂಡಿಸಿ ಬುದ್ಧಿ ಹೇಳುವ ಆಯ್ದಕ್ಕಿಲಕ್ಕಮ್ಮನ 'ಆಸೆಯೆಂಬುದು ಅರಸಿಂಗಲ್ಲದೆ...' ಎಂಬ ವಚನವನ್ನು ಉದಾಹರಿಸುತ್ತಾಳೆ. ಆ ಮೂಲಕ ಹೆಣ್ಣು ಬದಲಾದ ಕಾಲಮಾನದಲ್ಲಿ ಕುಟುಂಬದೊಳಗೆ ತನ್ನ ಪಾತ್ರವನ್ನು ವಿಸ್ತರಿಸಿಕೊಳ್ಳುತ್ತಾ, ಪಾರಂಪರಿಕ ಅಧೀನತೆಯಿಂದ ಹೊರಬರುವಂತೆ ಮಹಿಳೆಯರಿಗೆ ಕರೆ ನೀಡುತ್ತಾಳೆ.

ನಾಟಕದಲ್ಲಿ ವಚನಚಳವಳಿ ಹಾಗೂ ಅಂಬೇಡ್ಕರ್ ವಿಚಾರಧಾರೆಯಿಂದ ಪ್ರೇರಣೆ ಹೊಂದಿದ ಪಾತ್ರವೆಂದರೆ, ಬಸವಣ್ಣ. ಆತ ಗ್ರಾಮ್ಷಿ ಹೇಳುವಂತಹ ಪ್ರತಿಯಜಮಾನಿಕೆಯನ್ನು

ನೈಜನೆಲೆಯಲ್ಲಿ ಕಟ್ಟಲು ಬಯಸುವವನು. ತಳವರ್ಗವನ್ನು ಊಳಿಗಮಾನ್ಯ ಯಜಮಾನಿಕೆಯ ಶೋಷಣೆಯಿಂದ ಮುಕ್ತಿಗೊಳಿಸಿ ಸಮಾನತೆ ಹಾಗೂ ಸಾಮರಸ್ಯ ಸಮಾಜ ಕಟ್ಟುವ ಆಶಯ ಹೊತ್ತವನು. ರಮೇಶನ ಮುಂದಾಳತ್ವದಲ್ಲಿ ಅದನ್ನು ಸಾಧಿಸಲು ಬಯಸುತ್ತಾನೆ. ಆದರೆ ಎಂ.ಎಲ್.ಎ. ಆದ ರಮೇಶ ಮೂಲ ಯಜಮಾನಿಕೆಯಂತೆ ಶೋಷಣೆಯ ಮಾರ್ಗ ಹಿಡಿದಾಗ ಬಸವಣ್ಣನು ಪ್ರತಿಭಟನೆ ವ್ಯಕ್ತಪಡಿಸುತ್ತಾನೆ.

"...ಶತಶತಮಾನಗಳಿಂದ ನಮ್ಮ ಜನಗಳಿಗೆ ಅಕ್ಷರ ಸಿಕ್ಕಿರಲಿಲ್ಲ. ಈ ಪುರೋಹಿತರು ಅಕ್ಷರ, ವಿದ್ಯೆಯನ್ನು ಗುತ್ತಿಗಿ ಹಿಡಿದಿದ್ರು..., ಈ ದೇಶನ್ನ ಬ್ರಿಟಿಷರು ಆಳಾಕ ಸುರು ಮಾಡಿದ ಮ್ಯಾಲೆ ನಮಗ ಬಾಬಾ ಸಾಹೇಬ ಅಂಬೇಡ್ಕರ ಪುಣ್ಯದಿಂದ ಅಕ್ಷರ ಕಲಿಯಾಕ, ಸಾಲಿಗ ಹೋಗು ಅವಕಾಶ ಸಿಕ್ಕಿತು..., ಬಸವಣ್ಣನ ದೆಸಿಯಿಂದ ಹನ್ನೆರಡನೆಯ ಶತಮಾನದಾಗ ನಮ್ಮ ಹಿರೇರಿಗೆಲ್ಲಾ ಲಿಂಗ ಕೊಟ್ಟ ಆತ್ಮಶುದ್ಧಿ ದೇಹಶುದ್ಧಿ ಮಾಡಿ ದುಡಕೊಂಡ ತಿನ್ನುದನ್ನ ಕಾಯಕ ಅಂತ ಕರದು ಎಲ್ಲಾರನ್ನು ಕರಕೊಂಡ..., ಆದ್ರ ಇವತ್ತ ಪರಿಸ್ಥಿತಿ ಏನಾಗೇದ ಅಂದ್ರ ಅವರೆಲ್ಲಾ ಬಸವಣ್ಣನನ್ನು ಮರತಾರ. ಭೂಮಿ ಪಾಮಿ ಮಾಡಕೊಂಡ ಗೌಡ್ರು, ದೇಸಾಯರು, ಕುಲಕರ್ಣಿಯಾರಾಗಿ ಮತ್ತ ನಮ್ಮನ್ನ ಆಳಾಕ ಹತ್ಯಾರ. ಇದನ್ನ ನಿಲ್ಲಿಸು ಸಲುವಾಗಿನೆ ಬಾಬಾ ಸಾಹೇಬ್ರು ಸಂವಿಧಾನ ಬರದು ನಮಗ ಬದುಕು ಗೌರವದ ಹಾದಿ ತೋರಿಸ್ಯಾರು. ಹಗಲು ರಾತ್ರಿಯನ್ನದ ನಾವು ನಮ್ಮ ಜನಗಳನ್ನ ಸಂಘಟನೆ ಮಾಡುತ್ತಿರುವುದು ನಮ್ಮ ಮ್ಯಾಲಿನ ದಬ್ಬಾಳಿಕೆ ನಿಲ್ಲಲಿ ಅಂತ...

'...ಮೇಣೆ ಹೊರು ಪದ್ಧತಿ, ವಾಡೇಕ ನಮ್ಮ ಹೆಣ್ಣ ಮಕ್ಕಳನ್ನ ಚಾಜದ ಹೆಸರಿನ್ಯಾಗ ಬೋಗಿಸೋ ಸಂಪ್ರದಾಯಕ್ಕ ಇನ್ನ ಮುಂದ ಅವಕಾಶ ಕೊಡುದಿಲ್ಲ... ಮೇಣೆದಾಗ ದೇಸಾಯಿ ಕುಂತ್ರೇನು ರಮೇಶ ಕುಂತ್ರೇನು ಅದನ್ನ ಹೊರುವವರು ಯಾರು ನಮ್ಮ ಮಂದಿನಾ ಅಲ್ಲೇನ.'

'...ನಾವು ಸೇಡು ತೀರಿಸಿಕೊಳ್ಳಬೇಕಾಗಿರುವುದು ಮ್ಯಾಲ ಜಾತಿಯವರ ಮ್ಯಾಲಾನು ಅಲ್ಲ. ಅವರ ಮಾಡಕೊಂಡ ಬಂದಿರುವ ದೌರ್ಜನ್ಯವನ್ನು ನಾವೂ ಮಾಡಬೇಕ ಅನ್ನುದೂ ಅಲ್ಲ. ನಮ್ಮ ಬಡತನದ ವಿರುದ್ಧ, ನಮ್ಮ ಅಜ್ಞಾನದ ವಿರುದ್ಧ, ನಮ್ಮ ಹಸಿವಿನ ವಿರುದ್ಧ. ಅದಕ್ಕ ದೇವರು ಧರ್ಮದ ಹೆಸರಿನಲ್ಲಿ ಹಿಂದಿನವರು ಮಾಡಿರುವ ಕಂದಾಚಾರಗಳನ್ನ, ಸಂಪ್ರದಾಯಗಳನ್ನು ನಿಲ್ಲಿಸಬೇಕ ಹೊರ್ತು ಅದಕ್ಕ ಹೊಸಾ ರೂಪಾ ಕೊಟ್ಟ ಸೇಡ ತೀರಿಸಿಕೊಳ್ಳುವ ಹಾದರ ಮಾಡಾಕ ಹೋಗಬ್ಯಾಡ."[10] ಬಸವಣ್ಣ ಹೇಳುವ ಈ ಮಾತುಗಳು, ಪ್ರತಿಯಜಮಾನಿಕೆ ಪಡೆದುಕೊಳ್ಳುತ್ತಿರುವ ಮೂಲ ಯಜಮಾನ್ಯದ ಸ್ವರೂಪ ಮತ್ತು ಅದರ ಬಗೆಗಿನ ಆತಂಕ ವ್ಯಕ್ತವಾಗುತ್ತದೆ. ಹಾಗೂ ಪ್ರತಿಯಜಮಾನಿಕೆಯು ತಳೆಯಬೇಕಾದ ನಿಲುವು ಮತ್ತು ಅದರ ಸ್ವರೂಪ ಚಿತ್ರಣವನ್ನು ಕಟ್ಟಿಕೊಡುತ್ತವೆ.

**ಉಪಸಂಹಾರ:**

ಒಟ್ಟಾರೆಯಾಗಿ ನೋಡುವುದಾದರೆ, ಭಾರತೀಯ ಸಮಾಜದಲ್ಲಿ

ಲಿಂಗಾಧಾರಿತವಾಗಿದೆ. ಇಲ್ಲಿನ ಗಂಡು ಎಂಬುದು ಯಜಮಾನಿಕೆಯ ನೆಲೆಯಾದರೆ, ಹೆಣ್ಣು ಎಂಬುದು ಅಧೀನ ನೆಲೆಯದ್ದಾಗಿದೆ. ಇದು ಮೇಲು ಕೀಳೆನ್ನದೆ ವರ್ಣವ್ಯವಸ್ಥೆಯೊಳಗಿನ ಎಲ್ಲ ಸ್ತರಗಳಿಗೂ ಸಮಾನವಾದದ್ದು. ಈ ನಿಟ್ಟಿನಲ್ಲಿ ಮೇಲ್ವರ್ಗದ ಹೆಣ್ಣೂ ಕೂಡ ಕೆಳವರ್ಗದ ಹೆಣ್ಣಿನಂತೆ ಅಧೀನಳಾಗಿರುತ್ತಾಳೆ. ಅದರಲ್ಲೂ ಮೇಲ್ವರ್ಗದ ಹೆಣ್ಣು ಹೆಚ್ಚು ನಿರ್ಬಂಧಿತಳಾಗಿರುತ್ತಾಳೆ. ಇಂತಹ ಬಂಧದಿಂದ ಹೊರಬರಲು ಕಂಡುಕೊಳ್ಳುವ ಹಲವುಬಗೆಯ ಉಪಾಯಗಳನ್ನು ಈ ನಾಟಕಗಳಲ್ಲಿ ನಾವು ಪ್ರತಿಯಜಮಾನಿಕೆಯ ತಂತ್ರರೂಪವಾಗಿ ಕಾಣಬಹುದು.

**ಕೊನೆ ಟಿಪ್ಪಣಿಗಳು:**


1. ಫಣಿರಾಜ್ ಕೆ. (2011). ಆಂಟೋನಿಯೊ ಗ್ರಾಮ್ಷಿ. ಅಭಿನವ ಪ್ರಕಾಶನ. ಬೆಂಗಳೂರು. ಪು.ಸಂ. 36
2. ಸುಜಾತ ಅಕ್ಕಿ. (2012). ಚಾಮ ಚೆಲುವೆ. ವಿಸ್ಮಯ ಪ್ರಕಾಶನ. ಬೆಂಗಳೂರು. ಪು.ಸಂ. 42
3. ಸುಜಾತ ಅಕ್ಕಿ. (2012). ಚಾಮ ಚೆಲುವೆ. ವಿಸ್ಮಯ ಪ್ರಕಾಶನ. ಬೆಂಗಳೂರು. ಪು.ಸಂ. 62.
4. ಮೇಟಿ ಮಲ್ಲಿಕಾರ್ಜುನ. (2013). ಸಬಾಲ್ಟ್ರನ್ ಓದು. ಅರುಹು ಕುರುಹು. ಮೈಸೂರು. ಪು.ಸಂ. 82
5. ಮಲ್ಲಿಕಾ ಶಂ. ಘಂಟಿ. (2015). ಚಾಜ. ಗೌತಮ ಪ್ರಕಾಶನ. ಬಳ್ಳಾರಿ. ಪು.ಸಂ. 8
6. ಮಲ್ಲಿಕಾ ಶಂ. ಘಂಟಿ. (2015). ಚಾಜ. ಗೌತಮ ಪ್ರಕಾಶನ. ಬಳ್ಳಾರಿ. ಪು.ಸಂ. 37-38
7. ಮಲ್ಲಿಕಾ ಶಂ. ಘಂಟಿ. (2015). ಚಾಜ. ಗೌತಮ ಪ್ರಕಾಶನ. ಬಳ್ಳಾರಿ. ಪು.ಸಂ. 49-50
8. ಮಲ್ಲಿಕಾ ಶಂ. ಘಂಟಿ. (2015). ಚಾಜ. ಗೌತಮ ಪ್ರಕಾಶನ. ಬಳ್ಳಾರಿ. ಪು.ಸಂ. 51
9. ಮೇಟಿ ಮಲ್ಲಿಕಾರ್ಜುನ. (2013). ಸಬಾಲ್ಟ್ರನ್ ಓದು. ಅರುಹು ಕುರುಹು. ಮೈಸೂರು. ಪು.ಸಂ. 17
10. ಮಲ್ಲಿಕಾ ಶಂ. ಘಂಟಿ. (2015). ಚಾಜ. ಗೌತಮ ಪ್ರಕಾಶನ. ಬಳ್ಳಾರಿ. ಪು.ಸಂ. 15

## ಪರಾಮರ್ಶನ ಗ್ರಂಥಗಳು:


1. ಅರವಿಂದ ಮಾಲಗತ್ತಿ (ಸಂ). (2006). ಕುವೆಂಪು ಕೃತಿ ವಿಮರ್ಶೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ. ಮೈಸೂರು.
2. ಗಿರಡ್ಡಿ ಗೋವಿಂದರಾಜ. (2012). ಸಮಗ್ರ ವಿಮರ್ಶೆ: ಸಂಪುಟ-3. ಸ್ವಪ್ನ ಬುಕ್. ಬೆಂಗಳೂರು.
3. ಫಣಿರಾಜ್ ಕೆ. (2011). ಆಂಟೋನಿಯೊ ಗ್ರಾಮ್ಷಿ, ಅಭಿನವ ಪ್ರಕಾಶನ. ಬೆಂಗಳೂರು.
4. ಮರುಳಸಿದ್ದಪ್ಪ ಕೆ. & ಕೃಷ್ಣಮೂರ್ತಿ ಹನೂರು. (2010). ಗಿರೀಶ ಕಾರ್ನಾಡರ ನಾಟಕಗಳು: ಕನ್ನಡದ ಪ್ರತಿಕ್ರಿಯೆ. ಸಂವಹನ ಪ್ರಕಾಶನ. ಮೈಸೂರು.
5. ರಹಮತ್ ತರೀಕೆರೆ. (2011). ಪ್ರತಿಸಂಸ್ಕೃತಿ. ಅಭಿನವ ಪ್ರಕಾಶನ. ಬೆಂಗಳೂರು.
6. ಮೇಟಿ ಮಲ್ಲಿಕಾರ್ಜುನ. (2013). ಸಬಾಲ್ಟರ್ನ್ ಓದು. ಅರುಹು ಕುರುಹು. ಮೈಸೂರು.
7. ಮಲ್ಲಿಕಾ ಶಂ. ಘಂಟಿ. (2015). ಚಾಜ. ಗೌತಮ ಪ್ರಕಾಶನ. ಬಳ್ಳಾರಿ.
8. ಸುಜಾತ ಅಕ್ಕಿ. (2012). ಚಾಮ ಚೆಲುವೆ. ವಿಸ್ಮಯ ಪ್ರಕಾಶನ. ಬೆಂಗಳೂರು.


**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.